ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಳ್ಳಾರಿ ಜಿಲ್ಲೆಯಲ್ಲಿ 5ನೇ ಪೊಲೀಸ್ ಬೆಟಾಲಿಯನ್ ಪ್ರಾರಂಭಿಸಲು ಸರ್ಕಾರದವರು ಈಗಾಗಲೇ ನಿರ್ಧರಿಸಿರುವುದು ನಿಜವಲ್ಲವೇ?

2) ಹಾಗಿದ್ದಲ್ಲಿ ಈ ಬೆಟಾಲಿಯನ್‌ನನ್ನು ಪ್ರಾರಂಭಿಸಲಾಗಿದೆಯೇ?

3) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

4) ಹಾಗಿದ್ದಲ್ಲಿ ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

1) ಇಲ್ಲ.

2) ಉದ್ಭವಿಸುವುದಿಲ್ಲ.

3) ಉದ್ಭವಿಸುವುದಿಲ್ಲ.

4) ಉದ್ಭವಿಸುವುದಿಲ್ಲ.

ವಿಷಯ: ಬಳ್ಳಾರಿಯಲ್ಲಿ ಪೋಲೀಸ್ ಪೆಟ್ರೋಲಿಂಗ್ ವ್ಯವಸ್ಥೆ.

858 (1318)

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬಳ್ಳಾರಿಯಲ್ಲಿ ಹೊಯ್ಸಳ, ಗರುಡ ರೀತ್ಯಾ ಪೋಲೀಸ್ ಪೆಟ್ರೋಲಿಂಗ್ ವ್ಯವಸ್ಥೆ ಮಾಡಲಾಗಿದೆಯೇ?

2) ಹಾಗಿದ್ದಲ್ಲಿ ಈಗ ಎಷ್ಟು ಇಂತಹ ಪೆಟ್ರೋಲಿಂಗ್ ವಾಹನಗಳ ವ್ಯವಸ್ಥೆ ಮಾಡಲಾಗಿದೆ?

3) ಬಳ್ಳಾರಿ ದರೋಡೆ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಇಂತಹ ವಾಹನಗಳ ವ್ಯವಸ್ಥೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಲಾಗುವುದೇ?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

1) ಹೌದು.

2) ಒಂದು.

3) ಅವಶ್ಯವೆಂದು ಕಂಡು ಬಂದಾಗ ವಾಹನಗಳ ಸಂಖ್ಯೆ ಹೆಚ್ಚಿಸಲಾಗುವುದು.

ವಿಷಯ: ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಕೇಂದ್ರದಿಂದ ವಿಶೇಷ ಅನುದಾನ.

861 (1328)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಕೇಂದ್ರ ಸರ್ಕಾರದಿಂದ ವಿಶೇಷ ಅನುದಾನ ಪಡೆಯಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):

ಅ) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ವಿಶೇಷ ಅನುದಾನಕ್ಕಾಗಿ ಕೇಂದ್ರ ಸರ್ಕಾರವನ್ನು ಕೋರಿರುವುದಿಲ್ಲ.

ವಿಷಯ: ಕಾರಂಜಾ ಯೋಜನೆಯನ್ನು ನಬಾರ್ಡ್ ನೆರವಿನ ಯೋಜನೆಯಡಿಯಲ್ಲಿ ಸೇರಿಸುವುದು

862 (1327)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಾರಂಜಾ ನೀರಾವರಿ ಯೋಜನೆಯನ್ನು ನಬಾರ್ಡ್ ನೆರವಿನ ಯೋಜನೆಯಡಿಯಲ್ಲಿ ಸೇರಿಸದೇ ಇರಲು ಕಾರಣಗಳೇನು?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

1) 1996-97ನೇ ಸಾಲಿನಲ್ಲಿ ಕಾರಂಜ ಭಾರಿ ನೀರಾವರಿ ಯೋಜನೆಯ ಉಳಿದ ಕಾಮಗಾರಿಗಳನ್ನು ನಬಾರ್ಡ್ ನೆರವಿನ ಆರ್.ಐ.ಡಿ.ಎಫ್ 3ರಡಿಯಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಯಿತು. ಇದರಂತೆ ಈ ಯೋಜನೆಯ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.70 ಕೋಟಿಗಳ ನೆರವನ್ನು ಕೋರಿ ಪ್ರಸ್ತಾವನೆಯನ್ನು ನಬಾರ್ಡ್‌ಗೆ ಡಿಸೆಂಬರ್ 96ರಲ್ಲಿ ಸಲ್ಲಿಸಲಾಯಿತು. ಆದರೆ ನಬಾರ್ಡ್ ಸಂಸ್ಥೆಯ